1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**36/2022**

ಹೆಸರುಃ ದೇವರಾಜ್ ಚಾಸಾಃ 5

ತಂದೆಃ ಚಂದ್ರಪ್ಪ ಫ್ರಾಸಾ: 6

ವಯಸ್ಸುಃ 35

ಉದ್ಯೋಗಃ ಕೂಲಿ

ವಾಸ ಸ್ಥಳಃ ಗೊಪ್ಪೇನಹಳ್ಳಿ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 12-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ ಸ್ಥಳ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸ್ಥಳ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 3 ಎಂದು ಗುರುತಿಸಲಾಗಿದೆ , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 3 ಡಿ ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕಃ 20-10-2021 ರಂದು ಚನ್ನಗಿರಿ ಬೀರೂರು ರಸ್ತೆಯ ಸೇತುವೆ ಪಕ್ಕದಲ್ಲಿ ಸಹಿಯನ್ನು ಮಾಡಿರುತ್ತೇನೆ . ಕಳ್ಳತನದ ವಿಚಾರವಾಗಿ ಆರೋಪಿಯನ್ನು ಹಿಡಿದಿರುವಾಗ ಪಂಚನಾಮೆಯ ಕಾಲಕ್ಕೆ ಸಹಿಯನ್ನು ಮಾಡಿರುತ್ತೇನೆ . ನನ್ನ ಜೊತೆ ಮಹಜರ್ ಗೆ ಚಾಸಾ 4 ರವರು ಸಹಿ ಮಾಡಿರುತ್ತಾರೆ . ಸದರಿ ಸಮಯದಲ್ಲಿ ಎಂ.ಓ 1 ರಿಂದ 4 ರವರೆಗೆ ಇರುವ ಮಾಲುಗಳನ್ನು ಮತ್ತು ಬೈಕನ್ನು ಸದರಿ ಆರೋಪಿಯಿಂದ ಪೊಲೀಸರು ವಶಪಡಿಸಿಕೊಂಡಿರುತ್ತಾರೆ . ರೂಃ 5000/- ( 500 ರೂ ಮುಖಬೆಲೆಯ 10 ನೋಟುಗಳು ಹಾಗೂ ರೂಃ 2000/-( 500 ರೂ ಮುಖಬೆಲೆಯ 4 ನೋಟುಗಳು) ಇದ್ದವು . ಎರಡು ಕಿವಿಯ ಓಲೆಗಳು ಮತ್ತು ಒಂದು ಚಿನ್ನದ ಉಂಗುರವನ್ನು

ವಶಪಡಿಸಿಕೊಂಡಿರುತ್ತಾರೆ . ಸದರಿ ಮಹಜರ್ ನ್ನು ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ಜರುಗಿಸಿರುತ್ತಾರೆ . ಕಬ್ಬಳ ಗ್ರಾಮದಿಂದ ಬೈಕ್ ನ್ನು ಕಳ್ಳತನ ಮಾಡಿ ತಂದಿರುತ್ತೇನೆ . ಗೊಪ್ಪೇನಹಳ್ಳಿಯ ಮನೆ ಹಾಗೂ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕೆಲವು ತಂತಿಯನ್ನು ಕಳ್ಳತನ ಮಾಡಿರುತ್ತೇನೆ ಎಂದು ಆರೋಪಿಯು ತಿಳಿಸಿರುತ್ತಾನೆ . ಬೈಕ್ ನ ಸಂಖ್ಯೆ ಕಎ 17 ಇಪಿ 4087 ಆಗಿತ್ತು .

ಈಗಾಗಲೇ ನಿ ಪಿ 5 ರಿಂದ 7 ವರೆಗೆ ಇರುವ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಈಗ ಸಾಕ್ಷಿಗೆ ಆರೋಪಿ ತೋರಿಸಿದ ಸ್ಥಳ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸ್ಥಳ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 8 ಎಂದು ಗುರುತಿಸಲಾಗಿದೆ , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 8 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ 1 ರವರ ಮನೆಯ ಮುಂದೆ ಮಾಡಿರುತ್ತೇನೆ , ನನ್ನ ಜೊತೆ ಚಾಸಾ 4 ರವರು ಸಹಿ ಮಾಡಿರುತ್ತಾರೆ . ಸದರಿ ಮಹಜರ್ ನ್ನು ಬೆಳಗ್ಗೆ 9.30 ರಿಂದ 10.00 ಗಂಟೆಯವರೆಗೆ ಜರುಗಿಸಿರುತ್ತಾರೆ .

ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಈಗಾಗಲೇ ನಿ ಪಿ9 ರಲ್ಲಿ ಇರುವ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –

ಚಾಸಾ 4 ಮತ್ತು ನಾನು ಇಬ್ಬರು ಹೋಟೆಲ್ ವ್ಯಾಪಾರಸ್ಥರು ಎಂದರೆ ಸಾಕ್ಷಿಯು ನಾನು ಅವರ ಹೋಟೆಲ್ ನಲ್ಲಿ ಕೆಲಸಕ್ಕೆ ಹೋಗುತ್ತೇನೆ ಎಂದು ನುಡಿಯುತ್ತಾರೆ . ಸದರಿ ಪಂಚನಾಮೆಯ ಚಕ್ಕುಬಂಧಿಯನ್ನು ನನಗೆ ಹೇಳಲು ಆಗುವುದಿಲ್ಲ . ಸದರಿ ನಿ ಪಿ 3 ರ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ಹಾಗೂ ಚಾಸಾ

1 ರವರ ಮನೆಯ ಹತ್ತಿರ ಆರೋಪಿ ತೋರಿಸಿದ ನಿ ಪಿ 8 ಸ್ಥಳ ಪಂಚನಾಮೆಯನ್ನು 9.30 ರಿಂದ 10.00 ಗಂಟೆಯವರೆಗೆ ಮಾಡಿರುತ್ತಾರೆ . ಸದರಿ ಪಂಚನಾಮೆಗಳನ್ನು ಪೋಲೀಸರು ಬರೆದರು ನಾನು ಸಹಿಯನ್ನು ಮಾಡಿರುತ್ತೇನೆ , ಅವರ ಹೆಸರು ನನಗೆ ಹೇಳಲಾಗುವುದಿಲ್ಲ . ಸದರಿ ಪಂಚನಾಮೆಗೆ ನನ್ನ ಜೊತೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಹೆಸರು ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ನಾವಿಬ್ಬರೇ ಸಹಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ , ಪೊಲೀಸರ ಕೋರಿಕೆಯ ಮೇರೆಗೆ ಸಹಿಯನ್ನು ಮಾಡಿರುತ್ತಾರೆ . ಪೊಲೀಸರಿಂದ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ . ನಾನು ಹಾಗೂ ಚಾಸಾ 1 ರವರು ವಿಶ್ವಾಸಿಗರು ಎಂದರೆ ಸರಿ .

ಅಮಾನತ್ತು ಪಂಚನಾಮೆಯನ್ನು ಮಾಡುವಾಗ ವಶಪಡಿಸಿಕೊಂಡ ಮಾಲುಗಳು ಒಟ್ಟು 8 ಗ್ರಾಂ ನ ಓಲೆ ಹಾಗೂ ಒಂದು ಸಣ್ಣ ಉಂಗುರವನ್ನು ಆಗಿರುತ್ತವೆ . ನಿ ಪಿ 3 ರಲ್ಲಿರುವ ಸ್ಥಳ ಪಂಚನಾಮೆ ದಿಃ 20-10-2021 ರಂದು ಜರುಗಿಸಿರುತ್ತಾರೆ . ಇನ್ನುಳಿದ ಪಂಚನಾಮೆಗಳ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ . ಯಾವ ಯಾವ ದಿನಾಂಕದಂದು ಆರೋಪಿಯು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ . ಸ್ಥಳ ಪಂಚನಾಮೆ ಹಾಗೂ ಅಮಾನತ್ತು ಪಂಚನಾಮೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಹೌದು , ನಾನು ಅವಿದ್ಯಾವಂತ ಎಂದು ಮುಂದುವರೆದು ನುಡಿಯುತ್ತಾರೆ .

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**01** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**36/2022**

ಹೆಸರುಃ ಮೂರ್ತಿ .ಎಸ್.ಆರ್ ಚಾಸಾಃ 4

ತಂದೆಃ ರಾಜಪ್ಪ ಫ್ರಾಸಾ: 5

ವಯಸ್ಸುಃ 48

ಉದ್ಯೋಗಃ ಹೋಟೆಲ್ ವ್ಯಾಪಾರ

ವಾಸ ಸ್ಥಳಃ ಗೊಪ್ಪೇನಹಳ್ಳಿ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 12-10-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ ಸ್ಥಳ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸ್ಥಳ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 3 ಎಂದು ಗುರುತಿಸಲಾಗಿದೆ , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 3 ಸಿ ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕಃ 20-10-2021 ರಂದು ಚನ್ನಗಿರಿ ಬೀರೂರು ರಸ್ತೆಯ ಸೇತುವೆ ಪಕ್ಕದಲ್ಲಿ ಸಹಿಯನ್ನು ಮಾಡಿರುತ್ತೇನೆ . ಕಳ್ಳತನದ ವಿಚಾರವಾಗಿ ಆರೋಪಿಯನ್ನು ಹಿಡಿದಿರುವಾಗ ಪಂಚನಾಮೆಯ ಕಾಲಕ್ಕೆ ಸಹಿಯನ್ನು ಮಾಡಿರುತ್ತೇನೆ . ನನ್ನ ಜೊತೆ ಮಹಜರ್ ಗೆ ಚಾಸಾ 5 ರವರು ಸಹಿ ಮಾಡಿರುತ್ತಾರೆ . ಸದರಿ ಸಮಯದಲ್ಲಿ ಎಂ.ಓ 1 ರಿಂದ 4 ರವರೆಗೆ ಇರುವ ಮಾಲುಗಳನ್ನು ಮತ್ತು ಬೈಕನ್ನು ಸದರಿ ಆರೋಪಿಯಿಂದ ಪೊಲೀಸರು ವಶಪಡಿಸಿಕೊಂಡಿರುತ್ತಾರೆ . ರೂಃ 5000/- ( 500 ರೂ ಮುಖಬೆಲೆಯ 10 ನೋಟುಗಳು ಹಾಗೂ ರೂಃ 2000/-( 500 ರೂ ಮುಖಬೆಲೆಯ 4 ನೋಟುಗಳು) ಇದ್ದವು . ಎರಡು ಕಿವಿಯ ಓಲೆಗಳು ಮತ್ತು ಒಂದು ಚಿನ್ನದ ಉಂಗುರವನ್ನು

ವಶಪಡಿಸಿಕೊಂಡಿರುತ್ತಾರೆ . ಸದರಿ ಮಹಜರ್ ನ್ನು ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ಜರುಗಿಸಿರುತ್ತಾರೆ . ಕಬ್ಬಳ ಗ್ರಾಮದಿಂದ ಬೈಕ್ ನ್ನು ಕಳ್ಳತನ ಮಾಡಿ ತಂದಿರುತ್ತೇನೆ . ಗೊಪ್ಪೇನಹಳ್ಳಿಯ ಮನೆ ಹಾಗೂ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕೆಲವು ತಂತಿಯನ್ನು ಕಳ್ಳತನ ಮಾಡಿರುತ್ತೇನೆ ಎಂದು ಆರೋಪಿಯು ತಿಳಿಸಿರುತ್ತಾನೆ . ಬೈಕ್ ನ ಸಂಖ್ಯೆ: ಕಎ 17 ಇಪಿ 4087 ಆಗಿತ್ತು .

ಈಗಾಗಲೇ ನಿ ಪಿ 3 ರಿಂದ 7 ವರೆಗೆ ಇರುವ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಈಗ ಸಾಕ್ಷಿಗೆ ಆರೋಪಿ ತೋರಿಸಿದ ಸ್ಥಳ ಮಹಜರ್ ನ್ನು ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸ್ಥಳ ಮಹಜರ್ ನ್ನು ಈಗಾಗಲೇ ನಿಶಾನೆ ಪಿ 8 ಎಂದು ಗುರುತಿಸಲಾಗಿದೆ , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 8 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಚಾಸಾ 1 ರವರ ಮನೆಯ ಮುಂದೆ ಮಾಡಿರುತ್ತೇನೆ , ನನ್ನ ಜೊತೆ ಚಾಸಾ 5 ರವರು ಸಹಿ ಮಾಡಿರುತ್ತಾರೆ . ಸದರಿ ಮಹಜರ್ ನ್ನು ಬೆಳಗ್ಗೆ 9.30 ರಿಂದ 10.00 ಗಂಟೆಯವರೆಗೆ ಜರುಗಿಸಿರುತ್ತಾರೆ .

ಸಾಕ್ಷಿಯು ನ್ಯಾಯಾಲಯದಲ್ಲಿ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

ಈಗಾಗಲೇ ನಿ ಪಿ9 ರಲ್ಲಿ ಇರುವ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ .

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ -

ಪೊಲೀಸರು ಪಂಚನಾಮೆ ಮಾಡುವ ಕಾಲಕ್ಕೆ ನನಗೆ ದಿಃ 20-10-2021 ರಂದು ನೋಟೀಸನ್ನು ಕೊಟ್ಟಿದ್ದರು . ಚಾಸಾ 5 ಮತ್ತು ನಾನು ಒಂದೇ ಊರಿನವರು ಹಾಗೂ ಇಬ್ಬರು ವ್ಯಾಪಾರಸ್ಥರು ಎಂದರೆ ಸರಿ . ಪಂಚನಾಮೆಯ ಸಮಯದಲ್ಲಿ ಸ್ಥಳದಲ್ಲಿ 8 ರಿಂದ 10 ಜನ ನೆರದಿದ್ದರು . ಸದರಿ ಪಂಚನಾಮೆಗೆ ನನ್ನ ಜೊತೆ ಮತ್ತಿಬ್ಬರು ಸಹಿಯನ್ನು ಹಾಕಿರುತ್ತಾರೆ . ಆರೋಪಿಯು ಯಾವ ದಿನ , ಯಾವ ಸ್ಥಳದಲ್ಲಿ ಕಳ್ಳತನ ಮಾಡಿದ್ದಾನೆ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ . ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಎಷ್ಟು ಉದ್ದದ ತಾಮ್ರದ ತಂತಿಯನ್ನು ಅಳವಡಿಸಿದ್ದರು ಎಂದರೆ ಸಾಕ್ಷಿಯು ಆರೋಪಿಯು 20 ಮೀಟರ್ ತಾಮ್ರದ ತಂತಿಯನ್ನು ರೂಃ 6000/- ಕ್ಕೆ ಮಾರಿರುತ್ತೇನೆ ಎಂದು ನುಡಿಯುತ್ತಾನೆ . ಆರೋಪಿಯು ತಾಮ್ರದ ತಂತಿಯನ್ನು ಯಾರಿಗೆ ಮಾರಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ . ಸದರಿ ಆರೋಪಿಯು ಬೀಗ ಹೊಡೆದು ಮನೆಯ ಕಳ್ಳತನ ಮಾಡಿರುವ ಸಮಯದಲ್ಲಿ ಬೀಗವನ್ನು ಪೊಲೀಸರು ವಶಪಡಿಸಿಕೊಂಡಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ . ಮನೆಗೆ ಯಾವ ರೀತಿಯ ಬೀಗ ಹಾಕಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ . ನಿ ಪಿ 9 ರಲ್ಲಿರುವ ಮನೆಗೆ ಯಾವುದೇ ನಾಮಫಲಕ ಇರುವುದಿಲ್ಲ ಎಂದರೆ ಸಾಕ್ಷಿಯು ಅದು ಚಾಸಾ 1 ರವರ ಮನೆ ಎಂದು ನುಡಿಯುತ್ತಾರೆ . ಆರೋಪಿಯ ಬಳಿಯಿಂದ ವಶಪಡಿಸಿಕೊಂಡಿರುವ ಎಂ.ಓ 3 ಮತ್ತು 4 ರಲ್ಲಿರುವ ಬಂಗಾರದ ಒಡವೆಗಳು ಎಷ್ಟು ಗ್ರಾಂಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ .

ಸದರಿ ಪಂಚನಾಮೆಯನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ . ಚಾಸಾ 1 ಹಾಗೂ ನಾನು ಸಂಬಂಧಿಕರು ಎಂದರೆ ಸಾಕ್ಷಿಯು ನಾವು ಒಂದೇ ಊರಿನವರು ಎಂದು ನುಡಿಯುತ್ತಾರೆ . ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸದಿದ್ದರೂ ಕೂಡ ಚಾಸಾ 1 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**01** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.